ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ03/ಇಸಿಎಸ್(1)/2018

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 19-11-2018

ಸುತ್ತೋಲೆ

ವಿಷಯ : 2018 ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳ BOOKLETS COVER ಮತ್ತು HEAD SLIP COVER ಗಳನ್ನು ಬಂಡಲ್ ಮಾಡಲು ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರು/ ಮುಖ್ಯ ವೀಕ್ಷಕರು/ ಉಪ ಮುಖ್ಯ ಅಧೀಕ್ಷಕರು/ ಕೊಠಡಿ ಮೇಲ್ವಿಚಾರಕರು ಗಳು ಗಮನಿಸಬೇಕಾದ/ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/03/ಇಸಿಎಸ್(1)/2018 ದಿ: 07-11-2018

--------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆಯಲ್ಲಿ 2018 ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳು ಮತ್ತು ಹೆಡ್‌ಸ್ಲಿಪ್ ಕವರ್‌ಗಳನ್ನು ಪ್ಯಾಕಿಂಗ್ ಮಾಡುವ ವಿಧಾನವನ್ನು ತಿಳಿಸಲಾಗಿತ್ತು. ಮುಂದುವರೆದು ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು ಪರೀಕ್ಷಾ ಕೊಠಡಿಗಳಿಂದ ಸ್ವೀಕರಿಸಿದ ಉತ್ತರ ಪತ್ರಿಕೆಗಳ BOOKLETS COVER ಮತ್ತು HEAD SLIP COVER ಗಳುಳ್ಳ ಲಕೋಟೆಗಳನ್ನು ಈ ಕೆಳಕಂಡ ಮಾರ್ಪಾಡುಗಳಂತೆ ಪ್ಯಾಕಿಂಗ್ ಮಾಡಲು ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರುಗಳಿಗೆ ಸೂಚಿಸಲಾಗಿದೆ.

1) ***ATS ಪ್ರಕಾರ*** ಉತ್ತರ ಪತ್ರಿಕೆಗಳಿರುವ ***BOOKLET COVER (ದೊಡ್ಡ ಲಕೋಟೆ)*** ಮತ್ತು ಅದಕ್ಕೆ ಸಂಬಂಧಿಸಿದ ***HEAD SLIP COVER (ಸಣ್ಣ ಲಕೋಟೆ)*** ಗಳನ್ನು ಕೊಠಡಿ ***INVIGILATORS*** ಗಳಿಂದ ಪಡೆದು **QPCODE** ಹಾಗೂ ***ATS*** ಪ್ರಕಾರ ಜೋಡಿಸಿಕೊಂಡು ಇಟ್ಟುಕೊಳ್ಳುವುದು.

2) ದೊಡ್ಡ ಕೊಠಡಿ ಲಭ್ಯವಿರದ ಕಾರಣ ಒಂದು ***ATS*** ಗೆ ಸಂಬಂಧಿಸಿದ ಉತ್ತರ ಪತ್ರಿಕೆಗಳು ಹಾಗೂ ಅದಕ್ಕೆ ಸಂಬಂಧಿಸಿದ ***HEAD SLIP*** ಗಳು ಹಲವು ಕೊಠಡಿಗಳಿಗೆ ಇತರ ಲಕೋಟೆಗಳ ಮೂಲಕ ಹಂಚಿದ್ದರೆ ***(ATS SPLIT)*** ಅವುಗಳನ್ನು ತೆಗೆದು, ಒಂದು ***ATS*** ಗೆ ಸಂಬಂಧಪಟ್ಟ ಎಲ್ಲಾ ಉತ್ತರ ಪತ್ರಿಕೆಗಳನ್ನು ಒಂದೇ ***BOOKLET COVER (ದೊಡ್ಡ ಲಕೋಟೆ)*** ಗೆ ಹಾಗೂ ಅದಕ್ಕೆ ಸಂಬಂಧಿಸಿದ ***HEAD SLIP*** ಗಳನ್ನು ಒಂದೇ

***HEAD SLIP COVER (ಸಣ್ಣ ಲಕೋಟೆ)*** ಗೆ ಹಾಕುವುದು. ಕೊಠಡಿಗಾಗಿ ***ATS SPLIT*** ಮಾಡಿರದಿದ್ದರೆ ಇದರ ಅಗತ್ಯವಿಲ್ಲ. ಕೇವಲ ಒಂದೊಂದೇ ಲಕೋಟೆಗಳು ಇರುತ್ತದೆ.

3) ***ATS*** ಪ್ರಕಾರ ಉತ್ತರ ಪತ್ರಿಕೆಗಳಿರುವ ***BOOKLET COVER (ದೊಡ್ಡ ಲಕೋಟೆ)*** ಮತ್ತು ಅದಕ್ಕೆ ಸಂಬಂಧಿಸಿದ ***HEAD SLIP COVER (ಸಣ್ಣ ಲಕೋಟೆ)*** ಗಳನ್ನು ಅಡ್ಡವಾಗಿ ಮತ್ತು ಉದ್ದವಾಗಿ ಲಕೋಟೆ ಮುಚ್ಚುವ ಬಾಗದಲ್ಲಿ ಸುಮಾರು ***2 ಇಂಚಿನ BROWN PACKING TAPE*** ನಿಂದ ಯಾವುದೇ ರೀತಿಯಲ್ಲಿ ಲಕೋಟೆ ಹರಿದು ಹಾಳಾಗದಂತೆ ಮುಚ್ಚುವುದು. ಇವುಗಳಿಗೆ ***ಅರಗು ಸೀಲ್ ಮಾಡಬಾರದು.*** ಉತ್ತರ ಪತ್ರಿಕೆಗಳಿರುವ ***BOOKLET COVER (ದೊಡ್ಡ ಲಕೋಟೆ)*** ಯ ಮೇಲ್ಭಾಗದಲ್ಲಿ ***6 ಅಂಕೆಗಳ ATS ನಂಬರ್, QPCODE ಮತ್ತು ಒಟ್ಟು ಉತ್ತರ ಪತ್ರಿಕೆಗಳ ಸಂಖ್ಯೆ*** ಇವುಗಳನ್ನು ಹೊರತುಪಡಿಸಿ ಇತರ ಯಾವುದೇ ರೀತಿಯ ಮಾಹಿತಿ ಅಥವಾ ಗುರುತುಗಳು ಇರದಂತೆ ತುಂಬಾ ಎಚ್ಚರಿಕೆ ವಹಿಸತಕ್ಕದ್ದು. ತಪ್ಪಿದಲ್ಲಿ ಇದನ್ನು ***ಪರೀಕ್ಷಾ ದುರಾಚಾರವೆಂದು*** ಪರಿಗಣಿಸಿ ವಿಚಾರಣೆ ಹಾಗೂ ಕ್ರಮ ಕೈಗೊಳ್ಳಲಾಗುವುದು.

4) ಈ ಮೊದಲು ಉಪಯೋಗಿಸುತಿದ್ದ ***CONTENT SLIP*** ಅಂಟಿಸುವ ***OUTER COVER*** ಲಕೋಟೆಗಳನ್ನು ***BOOKLET COVER (ದೊಡ್ಡ ಲಕೋಟೆ)*** ಇಡುವುದಕ್ಕೆ ಇನ್ನು ಮುಂದಕ್ಕೆ ಉಪಯೋಗಿಸುವ ಅಗತ್ಯವಿಲ್ಲ. ಅದರ ಬದಲು ಒಂದು ದಿನದ ***ಪರೀಕ್ಷಾ ಸೆಷನ್ ಗೆ ( FN-Fore Noon ಅಥವಾ AN-After Noon )*** ಸಂಬಂಧಪಟ್ಟ ***ATS ಪ್ರಕಾರ*** ಉತ್ತರ ಪತ್ರಿಕೆಗಳಿರುವ ***BOOKLET COVER (ದೊಡ್ಡ ಲಕೋಟೆ)ಗಳನ್ನು*** ಎಲ್ಲವನ್ನು ಕಟ್ಟಿ ನೇರವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಬಂಡಲ್ ಮಾಡುವುದು. ಆದರೆ ಒಂದು ಬಟ್ಟೆಯ ಬಂಡಲ್ ನ ಒಳಗೆ ಸರಿ ಸುಮಾರು **275 ರಿಂದ 325 ಉತ್ತರ ಪತ್ರಿಕೆಗಳಿಗಿಂತ** ಹೆಚ್ಚು ಆಗದಂತೆ ***BOOKLET COVER (ದೊಡ್ಡ ಲಕೋಟೆ)ಗಳನ್ನು*** ಹೊಂದಾಣಿಕೆ ಮಾಡಿಕೊಂಡು ಬಂಡಲ್ ಮಾಡುವುದು ಅತೀ ಅಗತ್ಯವಾಗಿರುತ್ತದೆ ***(ಇದಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನು BTELinx ನಲ್ಲಿ ಹೊಸದಾಗಿ ಈಗ ಒದಗಿಸಲಾಗಿದೆ)*** . ಇದಲ್ಲದೆ ಸದರಿ ಬಟ್ಟೆಯ ಬಂಡಲ್ ನೊಳಗಿರುವ ಎಲ್ಲಾ ***BOOKLET COVER (ದೊಡ್ಡ ಲಕೋಟೆ)*** ಗಳಿಗೆ ಸಂಬಂಧಪಟ್ಟ ***HEAD SLIP COVER (ಸಣ್ಣ ಲಕೋಟೆ)*** ಗಳನ್ನು ಒಂದು ದೊಡ್ಡದಾದ ಲಕೋಟೆಯಲ್ಲಿ ಹಾಕಿ ***BROWN PACKING TAPE*** ನಿಂದ ಯಾವುದೇ ರೀತಿಯಲ್ಲಿ ಲಕೋಟೆ ಹರಿದು ಹಾಳಾಗದಂತೆ ಮುಚ್ಚುವುದು. ಇವುಗಳಿಗೆ ಸಹ ***ಅರಗು ಸೀಲ್*** ಹಾಕುವ ಅಗತ್ಯವಿಲ್ಲ. ಆದರೆ ಇದರ ಮೇಲ್ಭಾಗದಲ್ಲಿ ***BTELinx*** ನಲ್ಲಿ ಈಗ ಹೊಸದಾಗಿ ಒದಗಿಸಿದ ***CONSOLIDATED ATS REPORT OF DAILY EXAM SESSION*** ಎಂಬ ಹೊಸ ನಮೂನೆಯ ವರದಿಯನ್ನು ಅಂಟಿಸಿ ಇದನ್ನು ಸಹ ಅದಕ್ಕೆ ಸಂಬಂದಿಸಿದ ಅದೇ ಬಟ್ಟೆಯ ಚೀಲದ ( ಅಥವಾ ಚೀಲಗಳ ) ಒಳಗೆಯೇ ಇಡಬೇಕು.

5) ಮೇಲೆ ತಿಳಿಸಿದಂತೆ *ಪ್ರತಿ ಪರೀಕ್ಷಾ ಸೆಷನ್ ಗೆ ( FN-Fore Noon ಅಥವಾ AN-After Noon ) ಪ್ರತ್ಯೇಕ ಪ್ರತ್ಯೇಕವಾಗಿ* ತಯಾರು ಮಾಡಿದ ಬಟ್ಟೆಯ *ಬಂಡಲ್ ಗಳ* ಮೇಲೆ **BTELinx** ನಲ್ಲಿ ಈಗ ಹೊಸದಾಗಿ ಒದಗಿಸಿದ ***Secretary BTE*** ಯ ವಿಳಾಸ ಮತ್ತು ಇತರ ಪರೀಕ್ಷಾ ಸಂಬಂಧಿ ವಿವರಗಳಿರುವ ಸದರಿ ಅದೇ ಬಂಡಲ್ ಗೆ ಸಂಬಂಧಿಸಿದ ***ADDRESS TAG*** ಎಂಬ ನಮೂನೆಯನ್ನು ಅಂಟಿಸಿ ***Secretary BTE ಗೆ ಪ್ರತ್ಯೇಕ ಪ್ರತ್ಯೇಕವಾಗಿ*** ಅಂಚೆ ಮೂಲಕ ಯಾ ಮುದ್ದಾಂ ರವಾನಿಸಿ ತಲುಪಿದ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.

6) ಯಾವುದೇ ಒಂದು ಪತ್ಯದ ಪರೀಕ್ಷೆಗೆ ಯಾವುದೇ ವಿದ್ಯಾರ್ಥಿಗಳು ಹಾಜರಾಗದೆ ***ಖಾಲಿಯಾಗಿರುವ*** ಉತ್ತರ ಪತ್ರಿಕೆಗಳನ್ನು ಇಡಬೇಕಾದ ***BOOKLET COVER (ದೊಡ್ಡ ಲಕೋಟೆ)*** ಮತ್ತು ಅದಕ್ಕೆ ಸಂಬಂಧಿಸಿದ ***HEAD SLIP COVER (ಸಣ್ಣ ಲಕೋಟೆ)*** ಗಳನ್ನು ಬಿ.ಟಿ.ಇ (B.T.E) ಗೆ ರವಾನಿಸುವ ಅಗತ್ಯ ಇಲ್ಲ. ಇದರ ಮಾಹಿತಿಯು ***CONSOLIDATED ATS REPORT OF DAILY EXAM SESSION*** ಎಂಬ ಹೊಸ ನಮೂನೆಯ ವರದಿಯಲ್ಲಿ ಬಿ.ಟಿ.ಇ (B.T.E) ಗೆ ಸಿಗುತ್ತದೆ. ***ಆದರೆ ಇದಕ್ಕಾಗಿ BTELinx ನಲ್ಲಿ ಪರೀಕ್ಷೆಗಳ ಹಾಜರಾತಿ ಮತ್ತು ಇತರ ವಿಷಯಗಳನ್ನು ಪರೀಕ್ಷಾ ದಿನಗಳಂದೇ ತಪ್ಪದೆ ಇಂದೀಕರಿಸುವುದು (Update ಮಾಡುವುದು) ಅತೀ ಅಗತ್ಯ.ವಾಗಿರುತ್ತದೆ.***

ಮೇಲಿನ ಸೂಚನೆಗಳನ್ನು ಉತ್ತರ ಪತ್ರಿಕೆಗಳು ಮತ್ತು ಹೆಡ್‌ಸ್ಲಿಪ್ ಕವರ್‌ಗಳನ್ನು ಬಂಡಲ್ ಮಾಡುವಾಗ ಎಲ್ಲಾ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರು/ಕೊಠಡಿ ಮೇಲ್ವಿಚಾರಕರುಗಳು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ. ಈ ಕುರಿತಾದ ಯಾವುದೇ ಸ್ಪಷ್ಟನೆಗೆ ತಮ್ಮ ವಲಯದ ತನಿಖಾ ದಳಗಳನ್ನು/ ಮಂಡಳಿಯ ಅಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ
ಮುಖ್ಯ ಅಧೀಕ್ಷಕರು / ಉಪಮುಖ್ಯಅಧೀಕ್ಷಕರು / ಪರೀಕ್ಷಕರು / ವೀಕ್ಷಕರುಗಳಿಗೆ
– ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ತನಿಖಾದಳಗಳ ಮುಖಂಡರುಗಳಿಗೆ – ಮಾಹಿತಿಗಾಗಿ
2. ಇ ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಗಣಕ ಕೇಂದ್ರ– ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.